


ಎಂದು ಯೋಚಿಸಿದರೆ ಒಬ್ಬರ ಮೇಲೊಬ್ಬರು ಮುಗಿಬಿದ್ದು, ಒಬ್ಬರು ಆಡಿದ ಮಾತನ್ನು ಇನ್ನೊಬ್ಬರು ಕೇಳಿಸಿಕೊಳ್ಳದೆ, ಬೇರೆಯವರಿಗೂ ಕೇಳಿಸಿಕೊಳ್ಳಲು ಅವಕಾಶ ಕೊಡದೇ ಎರಚಿಕೊಂಡ ಕೆಸರಷ್ಟೇ ಮನಸಲ್ಲಿ ಉಳಿದಿರುತ್ತದೆ.

ಇಂದು ಮಾತೆಂಬುದು ಮಾಸ್ ಅನ್ನು ಮೈಮರೆಸಿ ವಂಚಿಸುವ ಉದ್ದೀಪನ ಮದ್ದು; ವಾದವೆಂಬುದು ಧಾರಾಳವಾಗಿ ಮಾರಾಟವಾಗುತ್ತಿರುವ ಮಾರುಕಟ್ಟೆಯ ಸರುಕು. ಇಂದಿನ ಬಹುತೇಕ ರಾಜಕೀಯ ಪಕ್ಷಗಳು, ಸುದ್ದಿ ವಾಹಿನಿಗಳು, ಸಾಮಾಜಿಕ ಮಾಧ್ಯಮಗಳೆಲ್ಲ ಈ ಮದ್ದು–ಸರಕನ್ನು ಮಾರುತ್ತಿರುವ ಅನೈತಿಕ ಸೂಪರ್ ಮಾರ್ಕೆಟ್‌ಗಳು.

ನಮ್ಮ ಮನಸ್ಸನ್ನು ತುಸುವೇ ರಿವೈಂಡ್ ಮಾಡಿ ನೋಡಿದರೂ ನಮ್ಮ ಸಮಾಜದಲ್ಲಿ ಮಾತಿಗೂ ವಾದಕ್ಕೂ ಇದ್ದ ಮಹತ್ವ ಮನವರಿಕೆಯಾಗುತ್ತದೆ.

ತೊಗಲ ನಾಲಗೆ ನಿಜವ ನುಡಿಯಲೆಳೆಸಿದರೆ ತಾ–
ನಂಗೈಯಲ್ಲಿ ಪ್ರಾಣಗಳ ಹಿಡಿಯಬೇಕು;
ಇಲ್ಲದಿರೆ ನೀರಿನೊಲು ತಣ್ಣಗಿದ್ದವನದನು
ಉರಿಯ ನಾಲಗೆಯಲ್ಲಿ ನುಡಿಯಬೇಕು

ಬೆಂದ್ರೆಯವರ ಕವಿತೆಯ ಈ ಸಾಲುಗಳು, ಮಾತು ಮತ್ತು ಸತ್ಯದ ಸಂಬಂಧವನ್ನು ಜ್ವಲಿಸುವ ಕೆಂಡದ ಹಾಗೆ ತೆರೆದಿಡುತ್ತವೆ. ಸತ್ಯವ ನುಡಿಯುವವನಿಗೆ ಅದನ್ನು ಧರಿಸುವ ಶಕ್ತಿಯೂ ಇರಬೇಕು. ನುಡಿಯೊಳಗಾಗಿ ನಡೆಯೊಳಿಲ್ಲದವರು ಆಡಿದ ಸತ್ಯವೂ ಸತ್ವಹೀನವೇ ಆಗಿ ಕಾಣಿಸುತ್ತದೆ. ಮಾತುಗಳಿಂದಲೇ ಹುಟ್ಟುವ, ಬೆಳೆಯುವ ವಾದದ ಅಂತಿಮ ಉದ್ದೇಶ ಸತ್ಯವನ್ನು ಅರಿಯುವುದೇ ಆಗಿದೆ. ಹೀಗಾಗಿಯೇ ನಮ್ಮ ಬಹುತೇಕ ಜ್ಞಾನಶಾಖೆಗಳು ವಾದ ವಾಗ್ವಾದಗಳಿಂದಲೇ ಸತ್ಯದ ಕಡೆಗೆ ಮುಖ ಮಾಡಿ ಬೆಳೆದು ಬಂದಿವೆ.

ಹಾಗಾದರೆ ಇಂದು ನಾವು ಅನುದಿನವೂ ಮಾಡುವ 'ಡಿಬೇಟ್'ಗೆ ಸತ್ಯವನ್ನು ಧರಿಸುವ ಅಥವಾ ಭರಿಸುವ ಶಕ್ತಿ ಇದೆಯೇ? ವಾದಗಳು ನಮ್ಮ ಜ್ಞಾನವನ್ನು ಬೆಳೆಸುತ್ತಿವೆಯೇ? ಅಥವಾ ನಮ್ಮನ್ನು ಇನ್ನಷ್ಟು ಮೂಲಭೂತವಾದಿಗಳನ್ನಾಗಿ ಮಾಡುತ್ತಿವೆಯೇ?

ಈ ಪ್ರಶ್ನೆಗಳಿಗೆ ನೇರವಾಗಿ ಉತ್ತರ ಹುಡುಕುವ ಬದಲು, ತುಸು ಹೊರಳು ದಾರಿಯಿಂದ ವಾದದ ವಿವಿಧ ಸ್ವರೂಪಗಳನ್ನು, ಅದರ ಅಗತ್ಯ–ಅಪಾಯಗಳನ್ನು ಹಾಗೂ ಅದು ನಮ್ಮ ಜೀವನದಲ್ಲಿ ಹೆಣೆದುಕೊಂಡಿರುವ ರೀತಿಯನ್ನು ಅರಿಯಲು ಯತ್ನಿಸೋಣ.

***

ಬಯಸಿಯೋ ಬಯಸದೆಯೋ ನಾವೆಲ್ಲ ಒಂದಲ್ಲಾ ಒಂದು ಸಮಯದಲ್ಲಿ ವಾದದಲ್ಲಿ ಭಾಗಿಗಳಾಗುತ್ತೇವೆ. ಆದರೆ ವಾದವೆನ್ನುವುದು ಪೂರ್ವನಿರ್ಧರಿತ ಚರ್ಚೆಯಲ್ಲ. ಅದು ತಂತಾನೇ ಆ ಕ್ಷಣಕ್ಕೆ ನಮ್ಮ ಮಿದುಳಿನಲ್ಲಿ ಮೂಡುವ ನಾವು ನಿಯಂತ್ರಿಸಲಾಗದ ಕ್ರಿಯೆ. ಆದರೆ ಅದನ್ನು ಆಡಿ ತೋರಿಸಿದಾಗ ಅದು ವಾದವೆನಿಸಿಕೊಳ್ಳುತ್ತದೆ. ಅದು ಮೌಲ್ಯಪೂರಿತ ವಾದವೆನಿಸಿಕೊಳ್ಳಲು

> ವಾದ ಅನ್ನುವುದು ಅಪರಿಚಿತ ರಸ್ತೆಯ ಹಾಗೆ. ನೀವು ಎಲ್ಲಿಗೆ ತಲುಪುತ್ತೀರಿ ಎಂದು ನಿಮಗೇ ಗೊತ್ತುರುವುದಿಲ್ಲ.
>
> –ಅನಾಮಿಕ